ಕರ್ನಾಟಕ ವಿಧಾನಸಭೆ

ಮಂಗಳವಾರ ದಿನಾಂಕ 21ನೇ ಮಾರ್ಚ್ 2006ರಂದು

ಸದನವು ವಿಧಾನಸೌಧದಲ್ಲಿರುವ ವಿಧಾನಸಭೆಯ ಸಭಾಂಗಣದಲ್ಲಿ

ಬೆಳಿಗ್ಗೆ 11–00 ಗಂಟೆಗೆ ಸಮಾವೇಶಗೊಂಡಿತು.

ಅಧ್ಯಕ್ಷರು (ಶ್ರೀ ಕೃಷ್ಣ ರವರು) (ಅಧ್ಯಕ್ಷ)

ಪೀಠವನ್ನು ಅಲಂಕರಿಸಿದ್ದರು.

1. ಸಂತಾಪ ಸೂಚನೆ

ಅಧ್ಯಕ್ಷರು : ಈಗ ಸಂತಾಪ ಸೂಚನೆಗಳು. ಸ್ವಾತಂತ್ರ್ಯ ಹೋರಾಟಗಾರರು ಹಾಗೂ ವಿಧಾನಸಭೆಯ ಮಾಜಿ ಸದಸ್ಯರಾಗಿದ್ದ ಶ್ರೀ ಹೆಚ್. ವಿ. ವೀರೇಗೌಡ ಅವರು ನಿಧನ ಹೊಂದಿರುವುದನ್ನು ಈಸದನಕ್ಕೆ ಅತ್ಯಂತ ವಿಷಾದದಿಂದ ತಿಳಿಸ ಬಯಸುತ್ತೇನೆ.

ವಿಧಾನಸಭೆಯ ಮಾಜಿ ಸದಸ್ಯರಾಗಿದ್ದ ಶ್ರೀ ಹೆಚ್. ವಿ. ವೀರೇಗೌಡ ಅವರು 1915ರಲ್ಲಿ ಹಿಟ್ನಹಳ್ಳಿಕೊಪ್ಪಲು ಗ್ರಾಮದಲ್ಲಿ ಜನಿಸಿದ್ದು, ವೃತ್ತಿಯಲ್ಲಿ ಕೃಷಿಕರಾಗಿದ್ದರು. ಸ್ವಾತಂತ್ರ್ಯ ಹೋರಾಟಗಾರರಾಗಿದ್ದ ಶ್ರೀಯುತರು 1938ರಲ್ಲಿ ಶಿವಪುರದಲ್ಲಿ ನಡೆದ ಧ್ವಜ ಸತ್ಯಾಗ್ರಹದಲ್ಲಿ ಸಕ್ರಿಯವಾಗಿ ಭಾಗವಹಿಸಿ, 1947ರಲ್ಲಿ ಸೆರೆಮನೆ ವಾಸವನ್ನು ಅನುಭವಿಸಿದ್ದರು. ಮಳವಳ್ಳಿ ಟಿ.ಸಿ.ಸಿ.ಯ ಅಧ್ಯಕ್ಷರಾಗಿ, ಮಳವಳ್ಳಿ ತಾಲ್ಲೂಕು ವಿವಿದೋದ್ದೇಶ ಸಹಕಾರ ಸಂಘದ ಕಾರ್ಯದರ್ಶಿಯಾಗಿ, ತಾಲ್ಲೂಕು ಅಭಿವೃದ್ಧಿ ಮಂಡಳಿಯ ಅಧ್ಯಕ್ಷರಾಗಿ, ಮಂಡ್ಯ ಜಿಲ್ಲಾ ಮಂಡಳಿಯ ಉಪಾಧ್ಯಕ್ಷರಾಗಿ ಹಾಗೂ ಇತರ ಹಲವಾರು ವಿದ್ಯಾಸಂಸ್ಥೆಗಳ ಹಾಗೂ ಸಂಘ ಸಂಸ್ಥೆಗಳ ಪದಾಧಿಕಾರಿಗಳಾಗಿ ಸೇವೆ ಸಲ್ಲಿಸಿದ್ದು ಶ್ರೀಯುತರು ಎರಡನೇ ವಿಧಾನಸಭೆಗೆ ಮಳವಳ್ಳಿ ಕ್ಷೇತ್ರದಿಂದ ಆಯ್ಕೆಯಾಗಿದ್ದರು. ಶ್ರೀಯುತರು ದಿನಾಂಕ : 19.03.2006ರಂದು ನಿಧನ ಹೊಂದಿದರು.

ಶ್ರೀ ಹೆಚ್.ಡಿ. ಕುಮಾರಸ್ವಾಮಿ (ಮುಖ್ಯಮಂತ್ರಿಗಳು): ಮಾನ್ಯ ಅಧ್ಯಕ್ಷರೆ, ಸ್ವಾತಂತ್ರ್ಯ ಹೋರಾಟಗಾರರು ಹಾಗೂ ವಿಧಾನಸಭೆಯ ಮಾಜಿ ಸದಸ್ಯರಾಗಿದ್ದ ಶ್ರೀ ಹೆಚ್. ವಿ. ವೀರೇಗೌಡರವರು 19.03.2006 ರಂದು ನಿಧನರಾಗಿರತಕ್ಕ ಸಂದರ್ಭದಲ್ಲಿ ಸಂತಾಪಸೂಚನೆಯನ್ನು ತಾವೇನು ಮಂಡಿಸಿದ್ದೀರಿ ಅದನ್ನು ಅನುಮೋದಿಸುತ್ತ ಒಂದೆರಡು ಮಾತನ್ನು ಹೇಳಬಯಸುತ್ತೇನೆ. ಶ್ರೀಯುತರು ಮಂಡ್ಯ ಜಿಲ್ಲೆಯ ಹಿಟ್ನಹಳ್ಳಿಕೊಪ್ಪಲಿನಲ್ಲಿ 1915ರಲ್ಲಿ ಜನಿಸಿದ್ದು ಸ್ವಾತಂತ್ರ್ಯ ಹೋರಾಟಗಾರರಾಗಿದ್ದರು. ಶ್ರೀಯುತರು 1938ರಲ್ಲಿ ಶಿವಪುರದಲ್ಲಿ ನಡೆದು ಧ್ವಜ ಸತ್ಯಾಗ್ರಹದಲ್ಲಿ ಸಹ ಸಕ್ರಿಯವಾಗಿ ಭಾಗವಹಿಸಿದ್ದರು. ಇದಲ್ಲದೆ 1947ರಲ್ಲಿ

ಸೆರೆಮನೆವಾಸವನ್ನು ಅನುಭವಿಸಿದ್ದರು. ಮಳವಳ್ಳಿಯ ಟಿ.ಸಿ.ಸಿಯು ಅಧ್ಯಕ್ಷರಾಗಿ, ತಾಲ್ಲೂಕು ವಿವಿದೋದ್ದೇಶ ಸಹಕಾರ ಸಂಘದ ಕಾರ್ಯದರ್ಶಿಗಳಾಗಿ, ತಾಲ್ಲೂಕು ಅಭಿವೃದ್ಧಿ ಮಂಡಳಿಯ ಅಧ್ಯಕ್ಷರಾಗಿ, ಮಂಡ್ಯ ಜಿಲ್ಲಾ ಮಂಡಳಿಯ ಉಪಾಧ್ಯಕ್ಷ ರಾಗಿ ಹಾಗೂ ಇತರ ಹಲವಾರು ವಿದ್ಯಾಸಂಸ್ಥೆಗಳ ಹಾಗೂ ಸಂಘಸಂಸ್ಥೆಗಳ ಪದಾಧಿಕಾರಿಗಳಾಗಿ ಸೇವೆ ಸಲ್ಲಿಸಿದ್ದ ಅವರು ಎರಡನೇ ವಿಧಾನಸಭೆಗೆ ಮಳವಳ್ಳಿ ಕ್ಷೇತ್ರದಿಂದ ಆಯ್ಕೆಯಾಗಿದ್ದರು. ಮೃತರ ನಿಧನದಿಂದ ನಮಗೆಲ್ಲಾ ಅಪಾರವಾದ ನಷ್ಟವಾಗಿದೆ, ಮೃತರ ಕುಟುಂಬದವರಿಗೆ ದುಃಖವನ್ನು ಬರಿಸುವ ಶಕ್ತಿ ದೇವರು ಕೊಡಲಿ ಎಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಎನ್. ಚಲುವರಾಯಸ್ವಾಮಿ (ಸಾರಿಗೆ ಸಚಿವರು) : ಮಾನ್ಯ ಅಧ್ಯಕ್ಷರೆ, ನಮ್ಮ ಮಂಡ್ಯ ಜಿಲ್ಲೆಯ ಹಿರಿಯ ಸ್ವಾತಂತ್ರ್ಯ ಹೋರಾಟಗಾರರಾಗಿದ್ದ ಹೆಚ್. ವಿ. ವೀರೇಗೌಡರವರು ಇವರು ನಿಧನರಾಗಿದ್ದಾರೆ. ಅಂದಿನ ಸ್ವಾತಂತ್ರ್ಯ ಹೋರಾಟ ದಲ್ಲಿ ಅವರು ಬಹಳ ಪ್ರಮುಖವಾದ ಪಾತ್ರವನ್ನು ವಹಿಸಿದ್ದಂಥವರು. ಸಹಕಾರ ಚಳುವಳಿಯಲ್ಲಿ, ಸಹಕಾರಿ ಕ್ಷೇತ್ರದಲ್ಲಿ ಜಿಲ್ಲೆಯಲ್ಲಿ ಅವರದೇ ಆದಂಥ ಒಂದು ತತ್ವವನ್ನು ನೆಲೆಗೊಳಿಸುವುದರ ಮೂಲಕ ಸ್ಥಳೀಯ ಟಿ.ಎ.ಪಿ.ಎಂ.ಎಸ್.ನ ಅಧ್ಯಕ್ಷರಾಗಿ ಜಿಲ್ಲೆಯ ಸರ್ವತೋಮುಖ ಅಭಿವೃದ್ಧಿಯ ದೃಷ್ಟಿಯಿಂದ ಬಹಳಷ್ಟು ಕೊಡುಗೆಯನ್ನು ಕೇವಲ ನಮ್ಮ ಜಿಲ್ಲೆಗೆ ಮಾತ್ರವಲ್ಲದೆ ಇಡೀ ರಾಜ್ಯದ ಜನತೆಗೆ ನೀಡಿರತಕ್ಕವರಾಗಿದ್ದರು. ಅವರು ಒಂದುಸಲ ವಿಧಾನಸಭೆಯ ಸದಸ್ಯರಾಗಿ ಸಹ ಸಮರ್ಥವಾಗಿ ಕೆಲಸ ನಿರ್ವಹಿಸಿ ಜನರ ಮೆಚ್ಚುಗೆಗೆ ಪಾತ್ರರಾಗಿದ್ದಾರೆ. ಅವರು ಈಗಲೂ ಕೂಡ ಸಾರ್ವಜನಿಕರ ಒಳ್ಳೆಯ ಕೆಲಸಗಳಿಗೆ ಸ್ಪಂದಿಸತ್ತಕ್ಕ ಹೃದಯ ಶ್ರೀಮಂತಿಕೆಯನ್ನು ಹೊಂದಿದ್ದರು. ಅವರ ಮಗ ಈಗಲೂ ಸಹ ಮಂಡ್ಯ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿ ಕೆಲಸ ಮಾಡುತ್ತಿದ್ದಾರೆ. ಅಂಥವರ ನಿಧನದಿಂದ ಇಡೀ ರಾಜ್ಯಕ್ಕೆ ನಷ್ಟವಾಗಿದೆ, ವಿಶೇಷವಾಗಿ ನಮ್ಮ ಮಂಡ್ಯ ಜಿಲ್ಲೆಗೆ ಬಹಳ ನಷ್ಟವಾಗಿದೆ. ಮೃತರ ಆತ್ಮಕ್ಕೆ ಭಗವಂತ ಶಾಂತಿಯನ್ನು ಕೊಡಲಿ. ಅವರ ಕುಟುಂಬದವರಿಗೆ ಅವರ ದುಃಖದ ಆಗಲಿಕೆಯಿಂದ ಉಂಟಾಗಿರುವ ನೋವನ್ನು ಭರಿಸುವ ಶಕ್ತಿಯನ್ನು ದೇವರು ದಯಪಾಲಿಸಲಿ ಎಂದು ಹೇಳಿ ತಮ್ಮ ನಿರ್ಣಯವನ್ನು ಅನುಮೋದಿಸುತ್ತೇನೆ.

ಶ್ರೀ ಜೆ. ಸಿ. ಮಾಧುಸ್ವಾಮಿ (ಚಿಕ್ಕನಾಯಕನಹಳ್ಳಿ) : ಮಾನ್ಯ ಅಧ್ಯಕ್ಷರೆ, ಮಾನ್ಯ ವೀರೇಗೌಡರ ನಿಧನಕ್ಕೆ ನಾನೂ ಕೂಡ ಸಂತಾಪವನ್ನು ಸೂಚಿಸುತ್ತಾ ನನ್ನ ಹಾಗೂ ನಮ್ಮ ಪಕ್ಷದ ವತಿಯಿಂದ ಅವರ ಆತ್ಮಕ್ಕೆ ಶಾಂತಿ ಸಿಗಲಿ ಮತ್ತು ಅವರ ಕುಟುಂಬ ವರ್ಗದವರಿಗೆ ಒಳ್ಳೆಯದು ಆಗಲಿ ಎಂದು ಹಾರೈಸುತ್ತಾ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) : ಮಾನ್ಯ ಅಧ್ಯಕ್ಷರೆ, ತಾವು ತಂದಿರುವ ಸಂತಾಪ ಸೂಚಕ ನಿರ್ಣಯಕ್ಕೆ ನಾನು ಬೆಂಬಲ ಸೂಚಿಸಿ ಅವರ ಆತ್ಮಕ್ಕೆ ಶಾಂತಿ ಕೋರುತ್ತೇನೆ. ಮಾಜಿ ಶಾಸಕರ ಕುಟುಂಬವರ್ಗದವರ ಪರಿಸ್ಥಿತಿ ಸುಧಾರಿಸಲು ಒಂದು ವ್ಯವಸ್ಥಿತ ಕಾರ್ಯಕ್ರಮ ಹಾಕಿಕೊಳ್ಳಬೇಕೆಂದು ಹಿಂದೆ ಅನೇಕ ಸಲ ನಾನು ಸದನದಲ್ಲಿ ಪ್ರಸ್ತಾಪ ಮಾಡಿದ್ದೇನೆ. ಅವರ ಮನೆಯ ಪರಿಸ್ಥಿತಿಗಳ ಬಗ್ಗೆ ತಾವು ತೀವ್ರವಾಗಿ ಕ್ರಮ ತೆಗೆದುಕೊಳ್ಳಬೇಕು. ತಾವು ಎಲ್ಲಾ ವಿರೋಧ ಪಕ್ಷಗಳ ಮುಖಂಡರುಗಳನ್ನು ಕರೆದು ಮಾತನಾಡಿ ಮಾಜಿ ಶಾಸಕರ ಕುಟುಂಬ ಹೇಗೆ ಜೀವನ ಮಾಡುತ್ತಿದೆ, ಅವರ ಪರಿಸ್ಥಿತಿ ಏನು, ಎಂಬ ಬಗ್ಗೆ ನೋಡಬೇಕು. ದಿವಂಗತ ಶಾಸಕರ ಕುಟುಂಬದ ಉಳಿದ ಸದಸ್ಯರು ಯಾವ ರೀತಿಯಲ್ಲಿ ತೊಂದರೆಗೀಡಾಗಿದ್ದಾರೆ ಎಂಬ ಬಗ್ಗೆ ತಾವು ಗಮನಹರಿಸಬೇಕು. ಅವರಿಗೆ ಏನು ಅನುಕೂಲ ಮಾಡಿಕೊಡಬೇಕು ಎಂಬ ಬಗ್ಗೆ ಕನಿಷ್ಟ ತಮ್ಮ ಇಲಾಖೆಯಲ್ಲಿ ಒಂದು ಸಮಿತಿಯನ್ನಾದರೂ ರಚನೆ ಮಾಡಬೇಕು. ಅಲ್ಲದೆ ಈ ಬಗ್ಗೆ ಸಂಬಂಧಪಟ್ಟ ಇಲಾಖೆ, ಮಾನ್ಯ ಮುಖ್ಯಮಂತ್ರಿಗಳ ಜೊತೆಗೆ ಮಾತನಾಡಬೆಕು. ಮಾಜಿ ಶಾಸಕರು ಅತ್ಯಂತ ನೋವಿನಲ್ಲಿದ್ದಾರೆ. ಕೆಲವರು ನಿವೃತ್ತಿ ವೇತನ ಪಡೆಯಲಿಕ್ಕೆ ಬರುತ್ತಾರೆ, ಅವರ ಪರಿಸ್ಥಿತಿ ನೋಡಿದರೆ ಬಹಳ ನೋವಾಗುತ್ತದೆ. ದಯಮಾಡಿ ತಾವು ಅವರ ತೊಂದರೆಗಳ ಬಗ್ಗೆ ಗಮನಹರಿಸಬೇಕು. ಈ ಸದನ ಮುಗಿಯುವುದರೊಳಗಾಗಿ ತಾವೊಂದು ಸಭೆ ಕರೆದು ತೀರ್ಮಾನ ತೆಗೆದುಕೊಳ್ಳಬೇಕು.

ಅಧ್ಯಕ್ಷರು : ಹಿಂದೆ ಶಾಸಕರ ಮತ್ತು ಮಾಜಿ ಶಾಸಕರ ಭತ್ಯೆ ಪರಿಷ್ಕರಣೆ ಆದಾಗ ಮಾಜಿ ಶಾಸಕರು ನಿಧರಾದಲ್ಲಿ ಅವರ ಪತ್ನಿಗೆ Pension ಕೊಡಬೇಕು ಎಂಬ ಪ್ರಸ್ತಾವನೆಯೂ ಇತ್ತು. ಆದರೆ ಕ್ಯಾಬಿನೆಟ್‌ನಲ್ಲಿ ಬಿದ್ದು ಹೋಯಿತು. ಕೊನೆ ಗಳಿಗೆಯಲ್ಲಿ ಅದು ಬಿಟ್ಟು ಹೋಯಿತು, ಅದು ಏಕೆ ಬಿಟ್ಟು ಹೋಯಿತೋ ನನಗೆ ಗೊತ್ತಾಗಲಿಲ್ಲ. ಮತ್ತೆ ಅವರಿಗೆ ಅದನ್ನು ಸೇರಿಸಿ ಎಂದು ನಾನು ಮನವಿಮಾಡಿಕೊಳ್ಳುತ್ತೇನೆ.

ಶ್ರೀ ವಾಟಾಳ್ ನಾಗರಾಜ್ : ಆ ಬಗ್ಗೆ ನಾವು ಮೊದಲೇ ಪ್ರಸ್ತಾಪಿಸಿದ್ದೇವು. ಆದರೂ ಅದು ಬಿಟ್ಟು ಹೋಗಿರುವುದು ಸರಿಯಲ್ಲ ಈ ಬಗ್ಗೆ ತಾವೇ ತೀರ್ಮಾನ ತೆಗೆದುಕೊಳ್ಳಬೇಕು. ಅಗತ್ಯ ಬಿದ್ದರೆ ಅದಕ್ಕೆ ತಿದ್ದುಪಡಿ ತಂದು ತಾವು ಆ ಕೆಲಸವನ್ನು ಮಾಡಬೆಕೆಂದು ಕೇಳಿಕೊಳ್ಳುತ್ತೇನೆ

ಶ್ರೀ ಡಿ. ಸಿ. ತಮ್ಮಣ್ಣ (ಮದ್ದೂರು) : ಮಾನ್ಯ ಅಧ್ಯಕ್ಷರೆ, ದಿವಂಗತ ಹೆಚ್. ವಿ. ವೀರೇಗೌಡರ ನಿಧನದಿಂದ ನನ್ನ ಮಂಡ್ಯ ಜಿಲ್ಲೆ ರಾಜಕೀಯವಾಗಿ ಬಡವಾಗಿದೆ ಎಂದು ನಾನಾದರೂ ಅಂದುಕೊಂಡಿದ್ದೇನೆ. ದಿವಂಗತ ಹೆಚ್. ವಿ.

ವೀರೇಗೌಡರು ಅಪರೂಪದ ವ್ಯಕ್ತಿತ್ವದ ರಾಜಕಾರಣಿಯಾಗಿದ್ದರು. ದಿವಂಗತ ಕೆ.ವಿ. ಶಂಕರೇಗೌಡರ ನಂತರ ಕಿರಿಯರಿಗೆ ಮಾರ್ಗದರ್ಶಕರಾಗಿ ಪ್ರಮಾಣಿಕತೆಯಿಂದ ರಾಜಕಾರಣ ಮಾಡಿದಂತಹ ರಾಜಕಾರಣಿಗಳಲ್ಲಿ ಹೆಚ್.ವಿ.ವೀರೇಗೌಡರು ಬಹಳ ಪ್ರಮುಖರು ಎಂದು ನಾನಾದರೂ ಭಾವಿಸಿ ಕೊಂಡಿದ್ದೇನೆ. ಅವರು ತಾಲ್ಲೂಕು ಪಂಚಾಯಿತಿ ಅಧ್ಯಕ್ಷರಾಗಿ, ಜಿಲ್ಲಾ ಪಂಚಾಯಿತಿಯ ಅಧ್ಯಕ್ಷರಾಗಿ, ಮಂಡ್ಯ ಕಾಂಗ್ರೆಸ್ಸಿನ ಅಧ್ಯಕ್ಷರಾಗಿ ಹಾಗೂ 1957 ರಿಂದ 62ರವರೆಗೆ ಈ ವಿಧಾನ ಸಭೆಯ ಸದಸ್ಯರಾಗಿ ಸೇವೆ ಸಲ್ಲಿಸಿದ್ದರು. ವಿಧಾನ ಸಭಾ ಸ್ಥಾನವನ್ನು ಬಿಟ್ಟ ಮೇಲೂ ಸಹ ಅವರು ಕೊನೆಯವರೆಗೂ ಕೂಡ ಅನೇಕ ಸಂಘ ಸಂಸ್ಥೆಗಲಲ್ಲಿ, ಸಹಕರಿ ರಂಗದಲ್ಲಿ ಪ್ರಾಮಾಣಿಕತೆಯಿಂದ ಸೇವೆ ಸಲ್ಲಿಸಿದಂತಹ ವ್ಯಕ್ತಿಯಾಗಿದ್ದರು. ಅವರು ಪಕ್ಷ ನಿಷ್ಠೆ ಹಾಗೂ ನಾಯಕ ನಿಷ್ಠೆಗೆ ಬಹಳ ಪ್ರಸಿದ್ಧಿಯಾದವರು. 1957 ರಿಂದ 1962ರ ವರೆಗೆ ವಿಧಾನ ಸಭೆಯ ಸದಸ್ಯರಾಗಿದ್ದ ಅವರು 1962ರಲ್ಲಿ ವಿಧಾನ ಸಭೆಯ ಚುನಾವಣೆಗೆ ಸ್ಪರ್ಧಿಸಬೇಕಾದಂತಹ ಸಂದರ್ಭದಲ್ಲಿ ದಿವಂಗತ ಕೆ.ವಿ. ಶಂಕರೇಗೌಡರು ಅವರನ್ನು ಕರೆದು, ವೀರೇಗೌಡರೆ, ಯುವಕರಿಗೆ ಪ್ರಾತಿನಿಧ್ಯ ಕೊಡಬೇಕು, ಆದುದರಿಂದ ನೀವು ಈ ಬಾರಿ ಜಿ. ಮಾದೇಗೌಡರಿಗೆ ನಿಮ್ಮ ಸ್ಥಾನವನ್ನು ಬಿಟ್ಟು ಕೊಡಿ ಎಂದು ಕೇಳಿದಾಗ, ಅವರು ಮಾತನಾಡದೆ ನೀವು ಹೇಗೆ ತೀರ್ಮಾನ ಮಾಡುತ್ತೀರೋ, ಹಾಗೆ ತಾವು ನಡೆದುಕೊಳ್ಳುತ್ತೇವೆ ಎಂದು ಹೇಳಿ ಆ ಸ್ಥಾನವನ್ನು ಬಿಟ್ಟು ಕೊಟ್ಟು ಬಹಳ ಪ್ರಾಮಾಣಿಕತೆಯಿಂದ ಪಕ್ಷಕ್ಕೆ ದುಡಿದಂತಹ ಅಪರೂಪದ ವ್ಯಕ್ತಿಯಾಗಿದ್ದರು. ಬೇರೆಯವರೇನಾದರೂ ಅವರ ಸ್ಥಾನದಲ್ಲಿ ಇದ್ದಿದ್ದರೆ ನಾನೇ ಮತ್ತೆ ವಿಧಾನ ಸಭಾ ಸ್ಥಾನಕ್ಕೆ ಸ್ಪರ್ಧಿಸುತ್ತೇನೆ, ಮತ್ತೊಮ್ಮೆ ಶಾಸಕನಾಗಿ ಆಯ್ಕೆಯಾಗಲು ಅವಕಾಶ ಕೊಡಿ ಎಂದು ಕೇಳುತ್ತಿದ್ದರು. ಮಂಡ್ಯ ಜಿಲ್ಲೆಯಲ್ಲಿ ಯುವಕರಿಗೆ ಪ್ರಾತಿನಿಧ್ಯ ಕೊಡಬೇಕು, ಹೊಸಬರು ಬರಬೇಕು, ಅವರನ್ನು ಬೆಳೆಸಬೇಕು ಎಂಬ ದೃಷ್ಟಿಯಿಂದ ಆ ರೀತಿ ನಡೆದುಕೊಂಡಂತಹ ಮಹಾನ್ ವ್ಯಕ್ತಿ ಹೆಚ್. ವಿ. ವೀರೇಗೌಡರು, ಅವರ ದೊಡ್ಡ ಗುಣದ ಬಗ್ಗೆ ಉದಾಹರಣೆಯೊಂದನ್ನು ಹೇಳಬೇಕೆಂದರೆ, ನಾನು 1998ರಲ್ಲಿ ಕಿರುಗಾವಲು ಕ್ಷೇತ್ರದಿಂದ ಚುನಾವಣೆಗೆ ಸ್ಪರ್ಧಿಸಿದಾಗ, ನನಗೆ ಮೊದಲು ಆಶೀರ್ವಾದ ಮಾಡಿದವರು ಅವರು, ಅವರು ನನಗೆ ಆಶೀರ್ವಾದ ಮಾಡಿ, ನಿಮ್ಮ ತಂದೆಯವರ ಋಣ ತೀರಿಸುವುದಕ್ಕೆ ನನಗೆ ಈಗ ಅವಕಾಶ ಸಿಕ್ಕಿತು ಎಂಬ ಮಾತನ್ನು ಹೇಳಿದ್ದರು. ನಾನು ತುಂಬಾ ಆಶ್ಚರ್ಯ ಪಟ್ಟೆ. ನಮ್ಮ ತಂದೆ ಅಂತಹ ದೊಡ್ಡ ರಾಜಕಾರಣಿಯಲ್ಲ. ಒಬ್ಬ ರೈತನಾದ ಅವರು ಏನು ಅಂತಹ ದೊಡ್ಡ ಉಪಕಾರವನ್ನು ನಿಮಗೆ ಮಾಡಿದ್ದರು ಎಂದು ಅವರನ್ನು ಕೇಳಿದೆ. ಆಗ ಅವರು 1957 ರಿಂದ 62 ರವರೆಗಿನ ವಿಧಾನ ಸಭಾ ಚುನಾವಣೆಯಲ್ಲಿ ನಾನು

ಮಳವಳ್ಳಿ ಕ್ಷೇತ್ರದಿಂದ ಸ್ಪರ್ಧಿಸಿದ್ದಾಗ, ಆಗ ಮಳವಳ್ಳಿ ಕ್ಷೇತ್ರ double constituency ಆಗಿತ್ತು ಮಲ್ಲಿಕಾರ್ಜುನ ಸ್ವಾಮಿಯವರು ಮತ್ತು ಇವರು ಒಂದೇ constituency ಯಲ್ಲಿ ಸ್ಪರ್ಧೆ ಮಾಡುತ್ತಿದ್ದರು, ಅವತ್ತಿನ ದಿವಸ ನಿಮ್ಮ ಊರಿಗೆ ಬಂದಾಗ ನಿಮ್ಮ ತಂದೆಯವರು, ನೀವು ಬಹಳ ಕಡೆ ಓಡಾಡಬೇಕಾಗುತ್ತದೆ, ಈಗ ನಮ್ಮ ಕಡೆಗೆ ಬಂದಿದ್ದೀರಿ, ಇಲ್ಲಿಯ 3–4 ಹಳ್ಳಿಗಳ ಕಡೆಗೆ ನೀವು ಮತ್ತೆ ಬರಬೇಡಿ, ನಾವೇ ಎಲ್ಲವನ್ನೂ ನೋಡಿಕೊಳ್ಳುವುದಾಗಿ ಹೇಳಿದ್ದರು, ಅದರಂತೆಯೇ ಅವರು ಪ್ರಮಾಣಿಕತೆಯಿಂದ ಕೆಲಸ ಮಾಡಿದರು ಎಂದು ಹೇಳಿದರು. ಒಂದು ಸಣ್ಣ ಉಪಕಾರವನ್ನು ಸಹ ಸ್ಮರಿಸುವಂತಹ ದೊಡ್ಡ ರಾಜಕಾರಣಿ ಅವರಾಗಿದ್ದರು. ಇವತ್ತಿನ ದಿವಸ ಎಷ್ಟೋ ದೊಡ್ಡ ರಾಜಕಾರಣಿಗಳು ದೊಡ್ಡ ಉಪಕಾರವನ್ನೇ ಸ್ಮರಿಸುವುದಿಲ್ಲ ಅಂತಹ ವ್ಯಕ್ತಿಗಳನ್ನು ಇವತ್ತಿನ ದಿವಸ ನೋಡುವುದು ಬಹಳ ಅಪರೂಪ. ಮಂಡ್ಯ ಜಿಲ್ಲೆಯ ರಾಜಕೀಯ ಹೆಚ್. ವಿ. ವೀರೇಗೌಡರ ನಿಧನದಿಂದಾಗಿ ತುಂಬಾ ಬಡವಾಗಿದೆ ಎಂದು ನಾನು ಭಾವಿಸುತ್ತೇನೆ. ಅವರ ನಿಧನಕ್ಕೆ ಸಂತಾಪವನ್ನು ಈ ಸಭೆಯಲ್ಲಿ ಸೂಚಿಸುತ್ತಾ, ಅವರ ಕುಟುಂಬ ವರ್ಗದವರಿಗೆ ಅವರ ನಿಧನದಿಂದ ಉಂಟಾಗಿರುವಂತಹ ದುಃಖವನ್ನು ಭರಿಸತಕ್ಕ ಶಕ್ತಿಯನ್ನು ಭಗವಂತನು ಅವರಿಗೆ ನೀಡಲೆಂದು ಪ್ರಾರ್ಥನೆ ಮಾಡಿಕೊಳ್ಳುತ್ತಾ, ನನ್ನ ಮಾತುಗಳನ್ನು ಮುಗಿಸುತ್ತೇನೆ.

ಅಧ್ಯಕ್ಷರು : ಮೃತರ ಗೌರವಾರ್ಥ ಸದನವು ಎದ್ದು ನಿಂತು ಒಂದು ನಿಮಿಷ ಮೌನವನ್ನಾಚರಿಸಬೇಕೆಂದು ಕೋರುತ್ತೇನೆ.

(ಮೃತರ ಗೌರವಾರ್ಥ ಸದನವು ಎದ್ದು ನಿಂತು ಒಂದು ನಿಮಿಷ ಮೌನ ಆಚರಿಸಿತು).

2. ಪ್ರಶ್ನೋತ್ತರ

ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಸದನದಲ್ಲಿ ನೀಡಲಾದ ಉತ್ತರಗಳು

ಬೆಂಗಳೂರಿನಲ್ಲಿ ಭಯೋತ್ಪಾದಕರುಗಳ ಚಟುವಟಿಕೆಗಳ ತಡೆಗಟ್ಟುವಿಕೆ.

(1) 102 ಶ್ರೀ ರಾಜೇಂದ್ರನ್ ಎಸ್. (ಕೆ. ಜಿ. ಎಫ್.) ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಇತ್ತೀಚೆಗೆ ಬೆಂಗಳೂರಿನ ಭಾರತೀಯ ವಿಜ್ಞಾನ ಮಂದಿರದ ಆವರಣದಲ್ಲಿ ಅಂತರ ರಾಷ್ಟ್ರೀಯ ಸಭೆ ನಡೆಯುತ್ತಿದ್ದಾಗ ಸಂಭವಿಸಿದ ಘಟನೆಗೆ ಸಂಬಂಧಿಸಿದಂತೆ ಎಷ್ಟು ಜನ ಭಯೋತ್ಪಾದಕರನ್ನು ಬಂಧಿಸಲಾಗಿರುತ್ತದೆ ?

ಆ) ರಾಜ್ಯದಲ್ಲಿ ಇಂತಹ ಚಟುವಟಿಕೆಗಳನ್ನು ಹತ್ತಿಕ್ಕಲು ಯಾವ ಕ್ರಮ ತೆಗೆದುಕೊಳ್ಳಲಾಗಿದೆ ?